**ದಿಃ06.08.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಂ.ಆರ್.ಜೆ ವಕೀಲರಿಂದ ಃ**

ಕರಕರ್ಣ ತಿಮ್ಮಯ್ಯ ನನ್ನ ಅಜ್ಜ. ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರಿಗೆ 7 ಜನ ಮಕ್ಕಳು ಎಂದರೆ ಸರಿ. ವಾದಿಗಳು ಕರಕರ್ಣ ತಿಮ್ಮಯ್ಯ ಇವರ ಮಗ ಕುಶಾಲಪ್ಪನವರ ವಾರಸುದಾರರು ಎಂದರೆ ಸರಿ. ವಾದಿಗಳು ನನ್ನ ತಂದೆಯ ಅಣ್ಣನ ಮಕ್ಕಳು. ನನ್ನ ಅಜ್ಜನ ಮಕ್ಕಳು ರುಕ್ಮಿಣಿ, ಮೊಣ್ಣಪ್ಪ, ದೊಡ್ಡಯ್ಯ, ಕುಶಾಲಪ್ಪ ತಮ್ಮಯ್ಯ, ನಿಲಮ್ಮ ಮತ್ತು ಜೋಯಪ್ಪ ಎಂದರೆ ಸರಿ. ನನ್ನ ಅಜ್ಜನ ಮಕ್ಕಳ ಪೈಕಿ ಮೊಣ್ಣಪ್ಪ ಕುಶಾಲಪ್ಪ ದೂಡ್ಡಯ್ಯ, ತಮ್ಮಯ್ಯ ಹಾಗೂ ನೀಲಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ.3 ರನ್ನು ತೋರಿಸಿ ಅದು ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರ ವಂಶವೃಕ್ಷ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರ ಕುಟುಂಬದ ಆಸ್ತಿಗಳು ಎಂದರೆ ಸುಳ್ಳು. ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರಿಗೆ ಗಾಳಿಬೀಡುವಿನಲ್ಲಿ ಎಷ್ಟು ಆಸ್ತಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಗಾಳಿಬೀಡುವಿನಲ್ಲಿ ಇರುವ ಆಸ್ತಿ ನನ್ನ ಅಜ್ಜನಿಗೆ ಪಿತ್ರಾರ್ಜಿತವಾಗಿ ಮತ್ತು ಸ್ವಯಾರ್ಜಿತವಾಗಿ ಬಂದಿದೆ. ನಿಮ್ಮ ಅಜ್ಜನಿಗೆ ಸ್ವಯಾರ್ಜಿತವಾಗಿ ಎಷ್ಟು ಎಕರೆ ಮತ್ತು ಯಾವ ರೀತಿ ಬಂದಿದೆ ಎಂದರೆ ಸಾಕ್ಷಿ ನನಗೆ ಯೋಚನೆ ಬರುತ್ತಿಲ್ಲ ಎನ್ನುತ್ತಾರೆ. ಕರಕರ್ಣ ತಿಮ್ಮಯ್ಯ ಇವರಿಗೆ ಗಾಳಿಬೀಡನ್ನು ಹೊರೆತು ಪಡಿಸಿ ಸುಳ್ಯ ತಾಲೂಕು ಆಲಟ್ಟಿ ಗ್ರಾಮದಲ್ಲೂ ಆಸ್ತಿ ಇತ್ತು ಎಂದರೆ ಸರಿ. ಆಲಟ್ಟಿ ಗ್ರಾಮದಲ್ಲಿ ಇದ್ದ ಆಸ್ತಿಯನ್ನು ನನ್ನ ಅಜ್ಜ ತಿಮ್ಮಯ್ಯ ಖರೀದಿ ಮಾಡಿದ್ದರು. ಸದರಿಯವರು ಯಾವಾಗ ಖರೀದಿ ಮಾಡಿದ್ದಾರೆ ಎಂದು ನೆನಪಿಲ್ಲ. ನನ್ನ ಅಜ್ಜ ತಿಮ್ಮಯ್ಯ ಇವರಿಗೆ ಮಡಿಕೇರಿ ತಾಲೂಕು ಕಾಲೂರು ಗ್ರಾಮದಲ್ಲಿ ಆಸ್ತಿ ಇತ್ತು ಎಂದರೆ

ಸರಿ. ಸದರಿ ಆಸ್ತಿಯನ್ನು ನನ್ನ ಅಜ್ಜ ತಿಮ್ಮಯ್ಯ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದಜುವರೆದು ಸದರಿ ಆಸ್ತಿಯನ್ನು ನನ್ನ ಅಜ್ಜ ತಿಮ್ಮಯ್ಯ, ಅವರ ಮಕ್ಕಳಾದ ಜೋಯಪ್ಪ, ಕುಶಾಲಪ್ಪ ಮತ್ತು ತಮ್ಮಯ್ಯ ಸೇರಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಮಡಿಕೇರಿ ತಾಲೂಕು ಕಾಲೂರು ಗ್ರಾಮದಲ್ಲಿ ಇದ್ದ ಆಸ್ತಿಯನ್ನು ನನ್ನ ಅಜ್ಜ ಮತ್ತು ಅವರ ಮೂರು ಜನ ಮಕ್ಕಳು ಸೇರಿ ಮಾರಾಟ ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರು ಮಾತ್ರ ಕಾಲೂರು ಗ್ರಾಮದ ಆಸ್ತಿಯನ್ನು ಮಾರಾಟ ಮಾಡಿ ಪ್ರುಫಲವನ್ನು ಸ್ವೀಕರಿಸಿದ್ದಾರೆ ಎಂದರೆ ಸರಿಯಲ್ಲ. ಕಾಲೂರು ಗ್ರಾಮದಲ್ಲಿ ಇದ್ದ ಆಸ್ತಿಯನ್ನು ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಮಾರಾಟ ಮಾಡಿ ಅದರಿಂದ ಬಂದ ಪ್ರತಿಫಲದಿಂದ ಆಲಟ್ಟಿ ಗ್ರಾಮದ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಆಲಟ್ಟಿ, ಮೋದೂರು ಮತ್ತು ತೋಳುರು ಚಟ್ಟಳ್ಳಿ ಗ್ರಾಮದ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎನ್ನುತ್ತಾರೆ. ಮೋದೂರು ಮತ್ತು ತೋಳುರು ಚಟ್ಟಳ್ಳಿ ಗ್ರಾಮದಲ್ಲಿ ಇದ್ದ ಆಸ್ತಿಗಳನ್ನು ನನ್ನ ಅಜ್ಜ ಕರಕರ್ಣ ತಿಮ್ಮಯ್ಯ ಇವರೇ ಖರೀದಿ ಮಾಡಿರಬಹುದು. ತೋಳುರು ಚಟ್ಟಳ್ಳಿ ಮತ್ತು ಮೋದೂರು ಗ್ರಾಮದಲ್ಲಿ ಇರುವ ಆಸ್ತಿಗಳನ್ನು ನನ್ನ ಅಜ್ಜ ಖರೀದಿ ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ತೋಳುರು ಚಟ್ಟಳ್ಳಿ ಮತ್ತು ಮೋದೂರು ಗ್ರಾಮದಲ್ಲಿ ಇರುವ ಆಸ್ತಿಗಳು ನನ ಅಜ್ಜನಿಗೆ ಸೇರಿದವು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಎರಡು ಗ್ರಾಮದ ಆಸ್ತಿಗಳನ್ನು ನನ್ನ ಅಜ್ಜ ಖರೀದಿ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3ನೇ ಖಂಡಿಕೆಯಲ್ಲಿ ತೋರಿಸಿರುವ ಆಸ್ತಿಗಳು ಹಾಲಿ ನನ್ನ

ಕುಟುಂಬಕ್ಕೆ ಲಭ್ಯ ಇಲ್ಲ ಎಂದರೆ ಸರಿ. ನನ್ನ ಅಜ್ಜ ಆಲಟ್ಟಿ ಗ್ರಾಮದಲ್ಲಿ ಖರೀದಿ ಮಾಡಿದ ಆಸ್ತಿಗಳನ್ನು ನನ್ನ ಎಲ್ಲಾ ಗಂಡು ಮಕ್ಕಳಿಗೂ ನೋಂದಾಯಿತ ವಿಭಾಗ ಪತ್ರದ ಮುಖಾಂತರ ಹಿಸ್ಸೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಆಲಟ್ಟಿ ಗ್ರಾಮದ ಆಸ್ತಿಗಳಿಗೆ ಸಂಬಂಧಿಸಿದಂತೆ ನೋಂದಾಯಿತ ವಿಭಾಗ ಪತ್ರ ಆಗಿದೆ ಎಂದರೆ ಸರಿ. ಸಾಕ್ಷಿಗೆ ಆಲಟ್ಟಿ ಗ್ರಾಮದ ಸರ್ವೆ ನಂ.54/1 ರ ಆರ್.ಟಿ.ಸಿಯನ್ನು ತೋರಿಸಿ ಸದರಿ ಆಸ್ತಿ ವಿಭಾಗದ ಪತ್ರದ ಮುಖಾಂತರ ನಮಗೆ ಬಂದಿದೆ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಒಪ್ಪಿದ್ದಾರೆ. ಸಾಕ್ಷಿಗೆ ತೋರಿಸಲಾದ ಆರ್.ಟಿ.ಸಿಯನ್ನು ನಿಪಿ.37 ಎಂದು ಗುರುತಿಸಲಾಯಿತು. ಆಲಟ್ಟಿ ಗ್ರಾಮದಲ್ಲಿ ಕುಶಾಲಪ್ಪನ ಭಾಗಕ್ಕೆ, ಮೊಣ್ಣಪ್ಪನವರ ಭಾಗಕ್ಕೆ, ದೂಡಯ್ಯನವರ ಭಾಗಕ್ಕೆ ಆಸ್ತಿ ಇವೆ ಎಂದರೆ ಸರಿ. ಆಲಟ್ಟಿ ಗ್ರಾಮದ ಆಸ್ತಿಗಳಿಗೆ ಸಂಬಂಧಿಸಿದಂತೆ ಆದ ವಿಭಾಗ ಪತ್ರದಲ್ಲಿ ಗಾಳಿಬೀಡುವಿನ ಆಸ್ತಿಗಳನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಗಾಳಿಬೀಡುವಿನಲ್ಲಿ ಇರುವ ನನ್ನ ಅಜ್ಜನ ಆಸ್ತಿಗಳು ಈಗಲೂ ಸಹ ಅವರ ವಾರಸುದಾರರ ಜಂಟಿ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ನನ್ನ ತಂದೆ ಭಾಗದಲ್ಲಿ ಗಾಳಿಬೀಡುವಿನಲ್ಲಿ ಮೂರು ವರೆ ಎಕರೆ ಆಸ್ತಿ ಇದೆ. ಗಾಳಿಬೀಡುವಿನಲ್ಲಿ ನಿಮ್ಮ ಅಜ್ಜನ ಉಳಿದ ಮಕ್ಕಳಿಗೆ ಎಷ್ಟೇಷ್ಟು ಆಸ್ತಿ ಇದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಗಾಳಿಬೀಡುವಿನಲ್ಲಿ ನನ್ನ ಅಜ್ಜನ ಇತರ ಮಕ್ಕಳಿಗೂ ಸಹ ಆಸ್ತಿ ಇದೆ. ಗಾಳಿಬೀಡುವವಿನಲ್ಲಿ ಇರುವ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಅಜ್ಜನ ವಾರಸುದಾರರ ನಡುವೆ 1971 ರಲ್ಲಿ ಹಿಸ್ಸೆ ಆಗಿದೆ. ಸದರಿ ಹಿಸ್ಸೆ ಬರವಣಿಗೆ ಮುಖಾಂತರ ಆಗಿರಬಹದು. ನಾನು ಈ ಸಂಬಂಧದ ದಸ್ತಾವೇಜುವನ್ನು ನೋಡಿಲ್ಲ. 1971 ರಲ್ಲಿ ಬರವಣಿಗೆ ಮುಖಾಂತರ ಗಾಳಿಬೀಡುವಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಹಿಸ್ಸೆ ಆಗಿದೆ

ಎಂಬ ವಿಚಾರವನ್ನು ನನ್ನ ತಂದೆ ನನಗೆ ತಿಳಿಸಿದ್ದಾರೆ. ನನ್ನ ತಂದೆ 1971 ರಲ್ಲಿ ಗಾಳಿಬೀಡು ಗ್ರಾಮದ ಆಸ್ತಿಗೆ ಸಂಬಧಿಸಿದ ಹಿಸ್ಸೆ ಕಾಲಕ್ಕೆ ಯಾರು ಯಾರ ನಡುವೆ ಆಗಿದೆ ಮತ್ತು ಸದರಿ ವಿಭಾಗದಲ್ಲಿ ಯಾರು ಯಾರಿಗೆ ಎಷ್ಟೇಷ್ಟು ಎಕರೆ ಆಗಿದೆ ಎಂದು ಹೇಳಿರುತ್ತಾರೆ. 1971 ರಲ್ಲಿ ಗಾಳಿಬೀಡುವಿನ ಆಸ್ತಿಗೆ ಸಂಬಂಧಿಸಿದಂತೆ ಆಗಿದೆ ಎಂದು ಹೇಳಲಾದ ವಿಭಾಗದ ಕಾಲಕ್ಕೆ ಕುಶಾಲಪ್ಪ ಮತ್ತು ಅವರ ವಾರಸುದಾರರಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ. ಗಾಳಿಬೀಡುವಿನಲ್ಲಿ ಇರುವ ನನ್ನ ಅಜ್ಜನಿಗೆ ಸೇರಿದ ಆಸ್ತಿಗಳಲ್ಲಿ ಕುಶಾಲಪ್ಪ ಇವರ ವಾರಸುದಾರಿಗೆ ಸಹ ಸಮಾನ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ಆಲಟ್ಟಿ ಗ್ರಾಮದಲ್ಲಿ ಇದ್ದ ಆಸ್ತಿಗಳ ಪೈಕಿ ನೋಂದಾಯಿತ ವಿಭಾಗ ಪತ್ರದ ಮುಖಾಂತರ ಕುಶಾಲಪ್ಪ ಇವರಿಗೆ ಹಿಸ್ಸೆ ಕೊಡಲಾಗಿದೆ ಹೊರೆತು ಬೇರೆಕಡೆ ಇರುವ ಆಸ್ತಿಗಳಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಗಾಳಿಬೀಡುವಿನಲ್ಲಿ ಇರುವ ನನ್ನ ಅಜ್ಜನ ಆಸ್ತಿಯಲ್ಲಿ ಕುಶಾಲಪ್ಪ ಮತ್ತು ಅವರ ವಾರಸುದಾರರಿಗೆ ವಿಭಾಗ ಪತ್ರದ ಮುಖಾಂತರ ಯಾವುದೇ ಆಸ್ತಿ ಕೊಟ್ಟಿಲ್ಲ ಎಂದರೆ ಸರಿ. ಕುಶಾಲಪ್ಪ ಇವರು ದಿಃ05.05.1980 ರಂದು ಕೂಡ್ಲೂರು ಚಟ್ಟಳ್ಳಿ ಗ್ರಾಮದಲ್ಲಿ ನಿಡಿ.17 ರಂತೆ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಕೂಡ್ಲೂರು ಚಟ್ಟಳ್ಳಿ ಗ್ರಾಮದಲ್ಲಿ ಇರುವ ಆಸ್ತಿಗಳನ್ನು ಕುಶಾಲಪ್ಪ ಇವರೆ ಸ್ವಾಧೀನಲ್ಲಿ ಇದ್ದುಕೊಂಡು ಅನುಭವಿಸುತ್ತಿದ್ದರು ಎಂದರೆ ಸರಿ. ಸದರಿ ಆಸ್ತಿಗಳನ್ನು ನಿಡಿ.18 ರಂತೆ ಕುಶಾಲಪ್ಪನವರೇ ತಮ್ಮ ಜೀವಿತಾಧಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಇರಬಹುದು ಎನ್ನುತ್ತಾರೆ. ಕೂಡ್ಲೂರು ಚಟ್ಟಳ್ಳಿ ಗ್ರಾಮದಲ್ಲಿ ಇದ್ದ ಆಸ್ತಿಗಳು ಕುಶಾಲಪ್ಪನವರ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಅವರೇ ನಿಡಿ.18 ರಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಡಿ.18 ರ ಕಾಲಕ್ಕೆ ನನ್ನ ಅಜ್ಜ ತಿಮ್ಮಯ್ಯ ಜೀವಂತ ಇದ್ದರಾ ಎಂದರೆ ಸಾಕ್ಷಿ

ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ.18 ರ ಖರೀದಿ ಪತ್ರ ಆದ ನಂತರ ಕುಶಾಲಪ್ಪ ಮತ್ತು ಅವರ ವಾರಸುದಾರರು ಆಲಟ್ಟಿ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ.

**ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮೂಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.